ಹೊರಡಿಸಬೇಕು. ಯಕ್ಷಗಾನ ಮೇಳ ಕಲೆಯಾದ್ದರಿಂದ ಯಾವುದೇ ಒಂದು ಜಾತಿಯ ಬಗ್ಗೆ ತಾರತಮ್ಯ ತೋರಿಸುವುದು ಸೂಕ್ತವಲ್ಲವೆಂಬ ಆದೇಶವನ್ನು ಹೊರಡಿಸುವುದೆಂದು ನನ್ನ ಸಲಹೆಯನ್ನು ಕೊಡುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಇದು ನೇರವಾಗಿ ಮಂದರ್ತಿ ಮೇಳಕ್ಕೆ ಸಂಬಂಧಿಸಿದ ವಿಷಯ ಅದನ್ನು ಬಗೆಹರಿಸಿದ್ದೇವೆ, ಸರ್ಕಾರ ತೆಗೆದುಕೊಂಡ ಈ ನಿರ್ಣಯವನ್ನು ತಾವು ಅಭಿನಂದಿಸಬೇಕಾಗಿತ್ತು, ನೀವು ಅಭಿನಂದಿಸಿಲ್ಲ, ಕಾನೂನು ಇತ್ಯಾದಿಗಳನ್ನು ನೋಡಿದರೆ ಸರಿಹೋಗುವುದಿಲ್ಲವೆನ್ನುವ ಕಾರಣಕ್ಕಾಗಿಯೇ ಜಿಲ್ಲಾಡಳಿತಗಳನ್ನು ಚುರುಕುಗೊಳಿಸಿ ಇದನ್ನೆಲ್ಲಾ ಬಗೆಹರಿಸಿದ್ದೇವೆ, ಬಹಳ ಸೂಕ್ಷ್ಮವಾದ ವಿಚಾರಗಳಿರುತ್ತವೆ, ಬೇರೆ ಕಡೆಗಳಲ್ಲಿರುವ ಇಂತಹ ಪ್ರಕರಣಗಳನ್ನು ನಮ್ಮ ಗಮನಕ್ಕೆ ತನ್ನಿ ಸಾರ್ವತ್ರಿಕವಾದ ಆಜ್ಞೆಯನ್ನು ಮಾಡುತ್ತೇವೆ.

ಶ್ರೀ ಕೆ. ರಘುಪತಿ ಭಟ್ : ಈ ನಿಲುವನ್ನು ಸ್ವಾಗತ ಮಾಡುತ್ತಿದ್ದೇವೆ.

(IV) ವಿಷಯ : ಮಾಹಿತಿಸಿಂಧು ಯೋಜನೆಯಡಿ ಕಂಪ್ಯೂಟರ್ ಶಿಕ್ಷಕರಿಗೆ ಆಗಿರತಕ್ಕಂಥ ಅನ್ಯಾಯ ಮತ್ತು ಅದರಲ್ಲಾಗಿರುವ ಅವ್ಯವಹಾರದ ಬಗ್ಗೆ.

† **ಶ್ರೀ ಸಿ.ಟಿ. ರವಿ(ಚಿಕ್ಕಮಗಳೂರು)** : ಮಾನ್ಯ ಅಧ್ಯಕ್ಷರೆ, ಮಾಹಿತಿ ಸಿಂಧು ಯೋಜನೆಯಡಿ ಕಂಪ್ಯೂಟರ್ ಶಿಕ್ಷಕರಿಗೆ ಆಗಿರತಕ್ಕಂಥ ಅನ್ಯಾಯ ಮತ್ತು ಅದರಲ್ಲಾಗಿರುವ ಅವ್ಯವಹಾರದ ಬಗ್ಗೆ ಸರ್ಕಾರದ ಗಮನ ಸೆಳೆಯುವುದಕ್ಕೆ ಇಚ್ಛಿಸುತ್ತೇನೆ.

† **ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)**: ಮಾನ್ಯ ಅಧ್ಯಕ್ಷರೇ ಬಹಳ ದೊಡ್ಡದಾದ ಉತ್ತರವಿದೆ, ಐದು ಪುಟಗಳಷ್ಟು ಉತ್ತರವಿದೆ. ಅದು ಅವರಿಗೇ ಸಂಬಂಧಪಟ್ಟ ವಿಚಾರವಾಗಿರುವುದರಿಂದ ತಾವು ಇದನ್ನು ಓದಿದ್ದೇನೆ ಎಂದು ಭಾವಿಸಬೇಕು. ಈ ಉತ್ತರವನ್ನು ಅವರಿಗೆ ಕಳುಹಿಸಿಕೊಡುತ್ತೇನೆ. ಅದರಿಂದ ಸಮಯ ಕೂಡ ಉಳಿಯುತ್ತದೆ ಎಂದು ಭಾವಿಸಿಕೊಂಡಿದ್ದೇನೆ. ಇದನ್ನು ನೋಡಿಕೊಂಡು ತಾವು ಏನಾದರೂ ಸ್ಪಷ್ಟೀಕರಣ ಕೇಳುವುದಿದ್ದರೆ ನಾಳೆ ಕೇಳಬಹುದು ಈಗ ಸಮಯವಿರದಿದ್ದರೆ. ಈಗಾಗಲೇ ಉತ್ತರ ಕಳುಹಿಸಿಕೊಟ್ಟಿದ್ದೇನೆ. ಆಗಬಹುದಾ ರವಿಯವರೇ ?

ರಾಜ್ಯದಲ್ಲಿ 1000 ಸರ್ಕಾರಿ ಪ್ರೌಢಶಾಲೆಗಳಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಮಾಹಿತಿ ಸಿಂಧು ಯೋಜನೆಯನ್ನು ಕಳೆದ $2^1/_2$ ವರ್ಷಗಳಿಂದ ಅನುಷ್ಠಾನಗೊಳಿಸಲಾಗುತ್ತಿದ್ದು. ಈ ಕಾರ್ಯವನ್ನು ಟರ್ನ್ ಕೀ ಲೀಸ್ ಆಧಾರದ ಮೇರೆಗೆ ನಿರ್ವಹಣಾ ಸಂಸ್ಥೆಗಳಾದ ಎನ್.ಐ.ಐ.ಟಿ. ಆಪ್ಟೆಕ್. ಮತ್ತು ಎಡುಕಾಂಪ್ ಡಾಟಾ ಮ್ಯಾಟಿಕ್ಸ್ ಲಿಮಿಟೆಡ್‌ಗಳು ಕ್ರಮವಾಗಿ 700,250 ಹಾಗೂ 50 ಶಾಲೆಗಳಲ್ಲಿ ಅನುಷ್ಠಾನ ಕಾರ್ಯನಿರ್ವಹಿಸುತ್ತಿರುತ್ತಾರೆ.

ಕರ್ನಾಟಕ ಪಾರದರ್ಶಕತೆ ಅಧಿನಿಯಮ 1999 ಅನ್ವಯ ಟರ್ನ್ ಕೀ ಲೀಸ್ ಆಧಾರದ ಮೇರೆಗೆ ಯೋಜನೆಯ 05 ವರ್ಷಗಳ ಅವಧಿಯಲ್ಲಿ ಆಯ್ಕೆ ಮಾಡಲಾಗುವ ಶಾಲೆಗಳಲ್ಲಿ 8.9.10ನೇ ತರಗತಿ ವಿದ್ಯಾರ್ಥಿಗಳಿಗೆ ಕಂಪ್ಯೂಟರ್

ಶಿಕ್ಷಣ ಮತ್ತು ಕಂಪ್ಯೂಟರ್ ಆಧಾರಿತ ಶಿಕ್ಷಣವನ್ನು ನೀಡುವ ಸಲುವಾಗಿ ಸಂಸ್ಥೆಗಳನ್ನು ಗುರುತಿಸಲು ತಾಂತ್ರಿಕ ಬಿಡ್‌ಗಳನ್ನು ದಿ;6.6.2004ರಂದು ಪ್ರಮುಖ ದಿನ ಪತ್ರಿಕೆಗಳಲ್ಲಿ ಪ್ರಕಟಣೆ ನೀಡುವ ಮೂಲಕ ಕರೆಯಲಾಯಿತು.

ತಾಂತ್ರಿಕ ಬಿಡ್ ಸಲ್ಲಿಸಲು ನೀಡಲಾಗಿದ್ದ ಆಹ್ವಾನವನ್ನು ಮನ್ನಿಸಿ 73 ಸಂಸ್ಥೆಗಳು ಟೆಕ್ನಿಕಲ್ ಬಿಡ್‌ಗಳನ್ನು ಸಲ್ಲಿಸಿದ್ದು, ಇವುಗಳಲ್ಲಿ 12 ಸಂಸ್ಥೆಗಳು ತಾಂತ್ರಿಕ ಅರ್ಹತೆ ಗಳಿಸಿರುವುದನ್ನು ಟಿ.ಎ.ಪಿ. ಸಭೆಯಲ್ಲಿ ಖಚಿತ ಪಡಿಸಿಕೊಳ್ಳಲಾಯಿತು. ಪೈಕಿ ಕೆಳಕಂಡ 5 ಸಂಸ್ಥೆಗಳು "ಕನಿಷ್ಠ 10 ಶಾಲೆಗಳಲ್ಲಿ ಟರ್ನ್ ಕೀ ಆಧಾರದ ಮೇರೆಗೆ ಕಂಪ್ಯೂಟರ್ ಶಿಕ್ಷಣ ಯೋಜನೆಯನ್ನು ಅನುಷ್ಠಾನಗೊಳಿಸಿರುವ ಪೂರ್ವಾನುಭವ ಹೊಂದಿರುವ ಪ್ರಯುಕ್ತ" ಇವುಗಳನ್ನು ಶಾರ್ಟ್‌ಲಿಸ್ಟ್ ಮಾಡಿ ಈ ಸಂಸ್ಥೆಗಳಿಂದ ಮಾತ್ರ ಕಮರ್ಷಿಯಲ್ ಬಿಡ್‌ಗಳನ್ನು ಅಹ್ವಾನಿಸಲು ತೀರ್ಮಾನಿಸಲಾಯಿತು.

1) ಎನ್. ಐ. ಐ. ಟಿ
2) ಆಪ್ಟೆಕ್
3) ಎಸ್.ಎಸ್.ಐ
4) ಐ.ಸಿ.ಎಸ್
5) ಎಡುಕಾಂಪ್

ಮೇಲ್ಕಂಡ 05 ಸಂಸ್ಥೆಗಳಿಂದ ಕಮರ್ಶಿಯಲ್ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕವನ್ನು 14.7.2000 ಎಂದು ನಿಗದಿಪಡಿಸಿ ನಂತರ ದಿ: 17–7–2000ರವರೆಗೆ ವಿಸ್ತರಿಸಿ ಅಹ್ವಾನಿಸಲಾಗಿದ್ದರೂ ಕೇವಲ 03 ಸಂಸ್ಥೆಗಳಾದ ಎನ್.ಐ.ಐ.ಟಿ. ಆಪ್ಟೆಕ್ ಮತ್ತು ಎಡುಕಾಂಪ್ ಸಂಸ್ಥೆಗಳು ಕಮರ್ಶಿಯಲ್ ಬಿಡ್‌ಗಳನ್ನು ಸಲ್ಲಿಸಿದವು.

ಎಲ್(1) ಸಂಸ್ಥೆಯಾದ ಎನ್.ಐ.ಐ.ಟಿ ಬಿಡ್‌ನಲ್ಲಿ ದರವನ್ನು ನೀಡುವಾಗ (ಬೆಂಗಳೂರು ಜಿಲ್ಲೆಯ ಎ ಕೆಟಗರಿ ಶಾಲೆಗಳಿಗೆ ಕನಿಷ್ಠ ಇ,ಕ್ಯೂ.ಝಡ್ ರೂ. 74,235 ಹಾಗೂ ದೂರದ ಜಿಲ್ಲೆಗಳಿಗೆ (ಬೀದರ್) ಇ.ಕ್ಯೂ.ಐ ರೂ 81,659/– ನ್ನು ನೀಡಿದರು.

ದಿನಾಂಕ : 27–7–2000ರಂದು ನಡೆದ ಟಿಎಪಿ ಸಭೆಯಲ್ಲಿ 03 ಸಂಸ್ಥೆಗಳು 03 ಸಂಸ್ಥೆಗಳು ಕಮರ್ಶಿಯಲ್ ಬಿಡ್‌ನಲ್ಲಿ ಸಲ್ಲಿಸಿರುವ ದರಗಳನ್ನು ಪರಿಶೀಲಿಸಲಾಯಿತು ಹಾಗೂ ಎಲ್(1) ಸಂಸ್ಥೆಯಾದ ಎನ್.ಐ.ಐ.ಟಿ ಯೊಂದಿಗೆ ಹಲವಾರು ಸುತ್ತುಗಳ ಸಮಾಲೋಚನೆ ನಡೆಸಿದ ನಂತರ ದಿ:7–8–2000ರಂದು ನಡೆದ ಟಿ.ಎ.ಪಿ. ಸಭೆಯಲ್ಲಿ ಕೆಳಕಂಡಂತೆ ಪ್ರವರ್ಗವಾರು ದರಗಳನ್ನು ನಿಗದಿಪಡಿಸಲಾಯಿತು. ಈ ದರವನ್ನು ನಂತರ ಸರ್ಕಾರದ ಹಂತದಲ್ಲಿ ಅನುಮೋದಿಸಲಾಗುತ್ತದೆ.

ಶಾಲೆಯ ಪ್ರವರ್ಗ	ಎಲ್(1) ಸಂಸ್ಥೆಯಾದ ಎನ್.ಐ.ಐ.ಟಿ. ಕಮರ್ಶಿಯಲ್ ಬಿಡ್‌ನಲ್ಲಿ ನಮೂದಿಸಿದ ಜಿಲ್ಲಾವಾರು (ಯೋಜನೆಯ 5 ವರ್ಷ ಅವಧಿಗೆ)	ಟಿ.ಎ.ಪಿ.ಸಭೆಯಲ್ಲಿ ಅಳವಡಿಸಲಾದ ದರ (ಯೋಜನೆಯ 5 ವರ್ಷ ಅವಧಿಗೆ)
ಎ	15.31 ಲಕ್ಷ	14.69 ಲಕ್ಷ
ಬಿ	20.34 ಲಕ್ಷ	19.10 ಲಕ್ಷ
ಸಿ	25.69 ಲಕ್ಷ	24.20 ಲಕ್ಷ

ಟಿ.ಎ.ಪಿ ಸಭೆಯಲ್ಲಿ ನಿರ್ಧಾರ ಕೈಗೊಂಡು ಪ್ರವರ್ಗವಾರು ಅನುಮೋದಿಸಿರುವ ದರಗಳು ಶೇಕಡಾ 5.64ರಷ್ಟು ಎಲ್(1) ಸಂಸ್ಥೆ, ಎನ್.ಐ.ಐ.ಟಿ ನಮೂದಿಸಿರುವ ದರಗಳಿಗಿಂತಲೂ ಕಡಿಮೆ ಇರುತ್ತದೆ.

ಮೇಲ್ಕಂಡ ವಿವರಗಳನ್ನು ತಾಂತ್ರಿಕ ಸಲಹಾ ಸಮಿತಿಯಲ್ಲಿ ಕೂಲಂಕುಷವಾಗಿ ಚರ್ಚಿಸಿದ ನಂತರವೇ ಸರ್ಕಾರದ ಹಂತದಲ್ಲಿ ಪ್ರವರ್ಗವಾರು ದರಗಳನ್ನು ನಿಗದಿಪಡಿಸಲಾಗುತ್ತದೆ.

ಕಮರ್ಶಿಯಲ್ ಬಿಡ್ ಸಂಗಡ ಸಲ್ಲಿಸಿರುವ Assumption sheetನಲ್ಲಿ ಕೆಲವು ಪ್ರಮುಖ ಅಂಶಗಳ ಖರ್ಚಿನ ವಿವರಗಳನ್ನು ಪ್ರಸ್ತಾಪಿಸದೇ ಇರುವ ಪ್ರಯುಕ್ತ. ಈ ಎರಡೂ ದಾಖಲೆಗಳಲ್ಲಿ ನಮೂದಿಸಿರುವ ದರಗಳಲ್ಲಿ ವ್ಯತ್ಯಾಸ ಇರುತ್ತದೆ.

ಎಲ್(1) ಸಂಸ್ಥೆಯಾದ ಎನ್.ಐ.ಐ.ಟಿ ಕಮರ್ಶಿಯಲ್ ಬಿಡ್‌ನೊಂದಿಗೆ ಸಲ್ಲಿಸಿರುವ "Assumptions made by the bidder on the basis of the which rates have been quoted" ಎಂಬ ಶೀರ್ಷಿಕೆಯಡಿ ಪ್ರವರ್ಗವಾರು ಪ್ರತಿ ಶಾಲೆಗೆ 05 ವರ್ಷಗಳ ಅವಧಿಯಲ್ಲಿ ಖರ್ಚಾಗಬಹುದಾದ ಪ್ರಮುಖ ವಿಷಯಗಳ ಬಗ್ಗೆ ದರಗಳನ್ನು ನಮೂದಿಸಿದ್ದು, ಈ ದರಗಳನ್ನು ಒಟ್ಟು ಮಾಡಿದಾಗ ಪ್ರವರ್ಗ ಎ.ಬಿ.ಸಿ. ಶಾಲೆಗಳಿಗೆ ಈ ಕೆಳಕಾಣಿಸಿದಂತೆ ಮೊತ್ತ ಉಂಟಾಗುತ್ತದೆ. ಆದರೆ ಇದು ಕಂಪನಿಯವರು ನೀಡಿದ ಬಿಡ್ ದರ ಅಲ್ಲ.

category A	9.76 lakhs
category B	13.04 lakhs
category C	16.75 lakhs

ಇವುಗಳಲ್ಲಿ ಹಲವಾರು ಖರ್ಚಿನ ವಿವರಗಳನ್ನು ಪೂರ್ಣವಾಗಿ ನಮೂದಿಸಿರುವುದಿಲ್ಲ ಎಂದು ದಿ: 22–7–2000ದ ಪತ್ರದಲ್ಲಿ ಸ್ಪಷ್ಟೀಕರಣವನ್ನು ನೀಡಿರುತ್ತಾರೆ. ಯೋಜನೆಯ 05 ವರ್ಷಗಳ ಅವಧಿಯಲ್ಲಿ ತರಬೇತಿ ವೆಚ್ಚದಲ್ಲಿ ಆರಂಭಿಕ ಖರ್ಚನ್ನು ಮಾತ್ರ ತೋರಿಸಿದ್ದು ನಂತರದ ಅವಧಿಯ ಖರ್ಚನ್ನು ನಮೂದಿಸಿರುವುದಿಲ್ಲವೆಂತಲೂ ಹಾಗೂ ಕೆಳಕಂಡ ಅಂಶಗಳ ಖರ್ಚಿನ ವಿವರವನ್ನೂ ಸಹ ನಮೂದಿಸಿರುವುದಿಲ್ಲವೆಂದು ಸ್ಪಷ್ಟೀಕರಣ ನೀಡಿದ್ದು, ಈ ವಿಷಯದ ಬಗ್ಗೆ ಸಹ ಹಲವಾರು ದಿನಾಂಕಗಳಲ್ಲಿ ನಡೆದ ಟಿಎಪಿ ಸಭೆಗಳಲ್ಲಿ ಸದೀರ್ಘ ಚರ್ಚೆ ನಡೆದು ತೀರ್ಮಾನ ಕೈಗೊಳ್ಳಲಾಗಿರುತ್ತದೆ.

1) Financial cost of the Capital Investment
2) Net working Cost
3) U.P.S. Cost
4) Project Management Cost +
5) Development cost of the Ineractive multimedita S/W
6) Customization cost of the interactive multimedia S/W
7) Salaries of superivisory and managerial staff deployed for the delivery of the programme of the 5 years.
8) Installation and commissioning of systems
9) Cost of logistics
10) Working capital cost
11) Insurance and Bank charges
12) Cost of stationery
13) Management overheads
14) Recruitment and retraining cost
15) Communications cost
16) Travel cost
17) Intellectual property cost of the multimedia S/W provided to the schools

ಮೇಲ್ಕಂಡ ವಿವರಗಳಿಂದ ಯಾವುದೇ ಭ್ರಷ್ಟಾಚಾರವು ಸರ್ಕಾರದ/ ಇಲಾಖೆಯ ಹಂತದಲ್ಲಿ ಈ ಯೋಜನೆಯ ಅನುಷ್ಠಾನ ಪೂರ್ವ ಕಾರ್ಯದಲ್ಲಿ ಹಾಗೂ ಕಳೆದ $2^{1}/_{2}$ ವರ್ಷಗಳ ಅವಧಿಯ ಅನುಷ್ಠಾನ ಕಾರ್ಯದಲ್ಲಿ ನಡೆದಿರುವುದಿಲ್ಲವೆಂದು ಸ್ಪಷ್ಟವಾಗುತ್ತದೆ.

ಕಮರ್ಶಿಯಲ್ ಬಿಡ್‌ನೊಂದಿಗೆ ಸಂಸ್ಥೆಗಳು ಸಲ್ಲಿಸಿರುವ "Assumptions" ವಿವರದಲ್ಲಿ 05 ವರ್ಷಗಳ ಅವಧಿಯಲ್ಲಿ ನಿರ್ವಹಣಾ ಸಂಸ್ಥೆಗಳು ಭರಿಸಬೇಕಾದ ಪ್ರಮುಖ ಅಂಶಗಳ ಖರ್ಚಿನ ವಿವರಗಳನ್ನು ಮಾತ್ರ ಕೇಳಲಾಗಿದ್ದು, ಈ ವಿವರದಲ್ಲಿ ಎನ್.ಐ.ಐ.ಟಿ ಸಂಸ್ಥೆಯವರು ದಿ: 22–7–2000ದ ಪತ್ರದಲ್ಲಿ ತಿಳಿಸಿರುವಂತೆ ಯೋಜನೆಗೆ ಸಂಬಂಧಿಸಿದ ಹಲವಾರು ಪ್ರಮುಖ ವಿಷಯಗಳ ಖರ್ಚಿನ ವಿವರಗಳು ಒಳಗೊಂಡಿರುವುದಿಲ್ಲ.

ನಿರ್ವಹಣಾ ಸಂಸ್ಥೆಗಳಿಗೆ ಹೆಚ್ಚಿನ ಅನುದಾನವನ್ನು ಯಾವುದೇ ಕಾರಣಕ್ಕೂ ಬಿಡುಗಡೆ ಮಾಡಲು ಸರ್ಕಾರವು ಕ್ರಮ ಕೈಗೊಂಡಿರುವುದಿಲ್ಲ.

ಇಂಜಿನಿಯರಿಂಗ್ ಕಾಲೇಜುಗಳ ತಪಾಸಣಾ ವರದಿಗಳ ಆಧಾರದ ಮೇರೆಗೆ ನಿರ್ವಹಣಾ ಸಂಸ್ಥೆಗಳಿಗೆ ತ್ರೈ ಮಾಸಿಕ ಕಂತುಗಳಲ್ಲಿ ಪ್ರಾರಂಭಿಕವಾಗಿ ತಡೆ ಹಿಡಿದಿರುವ ಶೇಕಡ 25ರ ಅನುದಾನ ಬಿಡುಗಡೆ ಮಾಡುವ ಸಂದರ್ಭದಲ್ಲಿ

ನಿರ್ವಹಣಾ ಸಂಸ್ಥೆಗಳ ಲೋಪದೋಷಗಳಿಗೆ ದಂಡವನ್ನು ವಿಧಿಸಲಾಗುತ್ತಿದೆ. 2001–02ನೇ ಸಾಲಿನಲ್ಲಿ ಟೆಲಿಫೋನ್, ಇಂಟರ್‌ನೆಟ್ ಇತ್ಯಾದಿ ಸೌಲಭ್ಯವನ್ನು ಒದಗಿಸದೇ ಇರುವ ಬಗ್ಗೆ ಹಾಗೂ ಇತರೆ ಲೋಪದೋಷಗಳಿಗೆ ಎಲ್ಲಾ 03 ನಿರ್ವಹಣಾ ಸಂಸ್ಥೆಗಳಿಗೆ ವಿಧಿಸಿರುವ ದಂಡದ ಪ್ರಮಾಣ ಒಟ್ಟಾರೆ ರೂ.05 ಕೋಟಿ ಮೀರಿದ್ದು. ಈ ಹಣವನ್ನು 2002–03ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನದಲ್ಲಿ ಕಡಿತ ಮಾಡಲಾಗಿರುತ್ತದೆ.

ಈ ಯೋಜನೆಯ ಅನುಷ್ಠಾನ ಕಾರ್ಯದಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಇಲಾಖೆಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ನಿರ್ವಹಣಾ ಸಂಸ್ಥೆಗಳು ನೇಮಿಸಿರುವ ಕಂಪ್ಯೂಟರ್ ಶಿಕ್ಷಕರಿಗೆ ಮಾಸಿಕ ವೇತನವನ್ನು ಪಾವತಿ ಮಾಡುವಲ್ಲಿ ಕೆಲವು ಸಂದರ್ಭಗಳಲ್ಲಿ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಇನ್ನು ಮುಂದೆ ಮಾಸಿಕ ವೇತನವನ್ನು ಸಕಾಲದಲ್ಲಿ ನಿರ್ದಿಷ್ಟ ದಿನಾಂಕದೊಳಗಾಗಿ ಪ್ರತಿ ಮಾಹೆ ವಿತರಿಸಲು ಎಲ್ಲಾ 03 ನಿರ್ವಹಣಾ ಸಂಸ್ಥೆಗಳಿಗೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

ಹಲವಾರು ಪ್ರೌಢಶಾಲೆಗಳು ತುಂಬಾ ಗ್ರಾಮೀಣ ಪ್ರದೇಶಗಳಲ್ಲಿ ಇರುವುದರಿಂದ ಕೆಲವು ಕಡೆ ಟೆಲಿಫೋನ್ ಸೌಲಭ್ಯವಾಗಲಿ/ಇಂಟರ್‌ನೆಟ್ ಸೌಲಭ್ಯವಾಗಲಿ ನೀಡುವುದು ಕಷ್ಟವಾಗುತ್ತಿದೆ. ಪ್ರಸ್ತುತ 1000 ಮಾಹಿತಿ ಸಿಂಧು ಶಾಲೆಗಳ ಪೈಕಿ ಟೆಲಿಫೋನ್ ಸೌಲಭ್ಯ ಇಲ್ಲದಿರುವ ಶಾಲೆಗಳ ಸಂಖ್ಯೆ 47 ಹಾಗೂ ಇಂಟರ್‌ನೆಟ್ ಸೌಲಭ್ಯ ಇಲ್ಲದಿರುವ ಶಾಲೆಗಳ ಸಂಖ್ಯೆ 202. ಈ ಸೌಲಭ್ಯಗಳನ್ನು ಒದಗಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಸಿ.ಟಿ. ರವಿ(ಚಿಕ್ಕಮಗಳೂರು) : ಉತ್ತರ ಈಗಷ್ಟೇ ಬಂದಿದೆ. ನನಗೆ ಗೊತ್ತಿರುವಂತಹ ಮಾಹಿತಿಯನ್ನು ಇಲ್ಲಿ ಹೇಳಲು ಇಚ್ಛಿಸುತ್ತೇನೆ, ಮಾಹಿತಿ ಸಿಂಧು ಯೋಜನೆಯನ್ನು ಒಳ್ಳೆಯ ಉದ್ದೇಶದಿಂದ ಸರ್ಕಾರ ಪ್ರಾರಂಭ ಮಾಡಿದ್ದರೂ ಮೂರು ಕಂಪನಿಗಳಿಗೆ ಎನ್‌ಐಐಟಿ. ಆಪ್‌ಟೆಕ್ ಎಜುಕಾಂ ಕಂಪನಿಗಳಿಗೆ ಸರ್ಕಾರ ಕಾಂಟ್ರಾಕ್ಟ್ ಕೊಟ್ಟಿದೆ. ಆದರೆ ಆ ಕಂಪೆನಿಗಳು ಒಳಗುತ್ತಿಗೆಯನ್ನು ಸರ್ಕಾರದ ಗಮನಕ್ಕೆ ತರದೆ ಕೊಟ್ಟು ಇಡೀ ಯೋಜನೆಯನ್ನೇ ನಿಷ್ಪಲಗೊಳಿಸುವ ಕೆಲಸವನ್ನು ಮಾಡುತ್ತಾ ಇವೆ. ಸುಮಾರು 203 ಕೋಟಿ ರೂಪಾಯಿಗಳ ಈ ಯೋಜನೆ ಏನಿದೆ, ನೀವು ಗ್ರಾಮೀಣ ಶಾಲೆಗಳಿಗೆ ಹೋದರೆ ಅಲ್ಲಿರುವ ಮುಖ್ಯೋಪಾಧ್ಯಾಯರೇ ಕೊಟ್ಟಿರುವ ವರದಿಯ ಪ್ರಕಾರ ಅವರು ಡಯಟ್‌ನ ಪ್ರಿನ್ಸಿಪಾಲರಿಗೆ ಬರೆದಿರುವಂತಹದು ಮತ್ತು ಕಂಪ್ಯೂಟರ್ ಕೇಂದ್ರಗಳಲ್ಲಿ ಯಾರು ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಅವರಿಗೆ ಬರೆದಿರುವ ದೂರಿನ ಹತ್ತಾರು ಶಾಲೆಗಳ ಪ್ರತಿಗಳು ನನ್ನ ಹತ್ತಿರ ಇವೆ. ಅವರು ಹೇಳುವ ಪ್ರಕಾರ ಇದು ಒಂದು ರೀತಿಯಲ್ಲಿ ಕೆಲವರಿಗೆ ಅನುಕೂಲ ಸಿಂಧು ಯೋಜನೆಯಾಗಿ ಪರಿವರ್ತನೆಯಾಗಿದೆ, ಸರ್ಕಾರ ಖರ್ಚು ಮಾಡುವ ಹಣದಲ್ಲಿ 30 ಭಾಗವೂ ಸದ್ವಿನಿಯೋಗವಾಗುತ್ತಾ ಇಲ್ಲ.

70ಕ್ಕಿಂತ ಹೆಚ್ಚು ಭಾಗ ಒಳಗೇ ಸೋರಿಹೋಗುತ್ತಿದೆ. ಎರಡು ಸಾವಿರ ಶಿಕ್ಷಕರು ಕಂಪ್ಯೂಟರ್ ಕಲಿಸಲಿಕ್ಕೆ ಅಲ್ಲಿ ನಿಯುಕ್ತಿಗೊಂಡಿದ್ದಾರೆ. ಅವರ ಪರಿಸ್ಥಿತಿ ಒಂದು ರೀತಿ ಜೀತದಾಳುಗಳದಾಗಿದೆ. ಕಳೆದ ವರ್ಷದವರೆಗೂ ಆ ಕಂಪ್ಯೂಟರ್ ಶಿಕ್ಷಕರಿಗೆ ಕೊಡುತ್ತಿದ್ದ ಹಣ ತಿಂಗಳಿಗೆ ಬರೀ 1700, 1800 ರೂಪಾಯಿ ಮೊನ್ನೆ ಕಳೆದ ವರ್ಷದಲ್ಲಿ ಡಿಎಸ್‌ಆರ್‌ಟಿಸಿಯಲ್ಲಿ ಒಂದು ಸಭೆಯಾದ ಮೇಲೆ ಈಗದನ್ನು2500 ರಿಂದ2700 ರೂಪಾಯಿಗಳಿಗೆ ಏರಿಸಿದ್ದಾರೆ. ಆದರೆ ಸರ್ಕಾರದ ಲೆಕ್ಕದಲ್ಲಿ ಇವತ್ತು ಶಿಕ್ಷಕರಿಗೆ ಖರ್ಚಾಗುವ ಹಣ 6000 ರೂಪಾಯಿ ಅವರು ಕಳೆದ ವರ್ಷದಿಂದ ಕೊಡುವ ಹಣ 2700 ರೂ ಅದಕ್ಕಿಂತ ಹಿಂದೆ ಬರೀ 1800, 1500 ರೂಪಾಯಿ ಮನಸ್ಸಿಗೆ ಬೇಕಾದ ಹಾಗೆ. ಅದೂ ಅವರ ಹತ್ತಿರ 5 ಸಾವಿರ ರೂಪಾಯಿ ಮುಂಗಡ ಹಣ ಪಡೆದು ಅವರನ್ನು ನಿಯುಕ್ತಿ ಮಾಡಿಕೊಂಡಿದ್ದು. ಸರ್ಕಾರದ ನಿಯಮದಡಿಯಲ್ಲಿ ಕಾರ್ಯನಿರ್ವಹಿಸಬೇಕಾದ ಈ ಸಂಸ್ಥೆಗಳು ಇದುವರೆಗೂ ವಿದ್ಯಾರ್ಥಿಗಳಿಗೆ ಈ ಸಾಲಿನ ಪಾಠಗಳ ಫ್ಲಾಪಿಯನ್ನು ಕೊಟ್ಟಿಲ್ಲ. ಅದರ ಬಗ್ಗೆ ವರದಿ ತರಿಸಿಕೊಳ್ಳಬೇಕು. ಇವತ್ತಿಗೂ ಶಾಲೆಗಳಿಗೆ ಫ್ಲಾಪಿ ಕೊಟ್ಟಿಲ್ಲ. ಮತ್ತು ಒಬ್ಬ ವಿದ್ಯಾರ್ಥಿಗಳಿಗೆ ಕನಿಷ್ಟ ಎರಡು ಗಂಟೆ ಇಂಟರ್‌ನೆಟ್ ಕೊಡಬೇಕೆಂದು ಏನಿದೆ, ತಿಂಗಳಿಗೆ ಎರಡು ಗಂಟೆ ಹೋಗಲಿ, ಎಷ್ಟೋ ಶಾಲೆಗಳಿಗೆ ಇಂಟರ್‌ನೆಟ್ಟೇ ಇಲ್ಲ, ಜಿಲ್ಲಾ ಪಂಚಾಯ್ತಿ ಮೂಲಕ ಕೊಠಡಿಗಳನ್ನು ಸುಸಜ್ಜಿತಗೊಳಿಸಲು 45 ಸಾವಿರ ರೂ ಹಣವನ್ನು ಬಿಡುಗಡೆ ಸರ್ಕಾರ ಮಾಡಿತು. ಈ ಸದನದ ಒಂದು ಸಮಿತಿ ಮಾಡಿ. ಆ ಶಾಲೆಗಳಿಗೆ ಹೋಗಿ ನೋಡಿ, ಕಂಪ್ಯೂಟರ್ ಕಲಿಸುವ ಕೊಠಡಿಗಳು ಯಾವ ದುಸ್ಥಿತಿಯಲ್ಲಿವೆ ಎಂಬುದು ಗೊತ್ತಾಗುತ್ತದೆ. ಬೆಂಗಳೂರು ಗ್ರಾಮಾಂತರ ಸುತ್ತಮುತ್ತಲಿನ ಶಾಲೆಗಳಲ್ಲಿ ಚಿಕ್ಕಮಗಳೂರಿನ ಶಾಲೆಗಳಲ್ಲಿ ಓಡಾಟ ಮಾಡಿದರೆ ವಾಸ್ತವಿಕ ಸತ್ಯ ಅರ್ಥವಾಗುತ್ತದೆ. ಅದಕ್ಕಾಗಿ ಸರ್ಕಾರಕ್ಕೆ ನಾನು ಹೇಳುವುದು ಏನು ಅಂದರೆ ಒಳಗುತ್ತಿಗೆ ಯಾರ್ಯಾರು ಕೊಟ್ಟಿದ್ದಾರೆ ಅದನ್ನು ತನಿಖೆ ಮಾಡಿ ರದ್ದುಪಡಿಸಬೇಕು. ಈ ಕಡೆ ಸರ್ಕಾರದ ಹಣ ಖರ್ಚಾಗುವುದು ತಪ್ಪಲಿಲ್ಲ, ಮತ್ತೆ ಯಾರು ಫ್ಯಾಕಲ್ಟಿ ಇದ್ದಾರೆ ಅವರಿಗೂ ಒಳ್ಳೆಯ ಸಂಬಳ ಸಿಗುತ್ತಿಲ್ಲ, ಈ ಮೂರು ಸಂಸ್ಥೆಗಳು ಪಿ ಎಫ್ ಕಟ್ಟುತ್ತಾ ಇಲ್ಲ, ಅಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಿಗೆ ಪಿಎಫ್ ಮತ್ತು ಇಎಸ್‌ಐ ಕಟ್ಟಬೇಕು ಇವತ್ತಿಗೂ ಕಟ್ಟುತ್ತಾ ಇಲ್ಲ, ವರದಿ ತರಿಸಿಕೊಂಡು ನೋಡಿ ಗೊತ್ತಾಗುತ್ತದೆ, ಅವರು ಎಷ್ಟು ಉಡಾಫೆಯಿಂದ ಉತ್ತರ ಕೊಡುತ್ತಾರೆ ಅಂದರೆ ನಾನೊಬ್ಬ ಶಾಸಕನಾಗಿ ಆ ಕಂಪೆನಿಗಳ ಮುಖ್ಯಸ್ಥರ ಜೊತೆ ಮಾತನಾಡಿದಾಗ ಎಲ್ಲವನ್ನೂ ಸರಿಮಾಡಿಕೊಂಡಿದ್ದೇವೆ ಅಂದರೆ ನಿಮಗೇನು ಉತ್ತರ ಕೊಡಬೇಕು ಎಂಬ ಉಡಾಫೆಯಿಂದ ವ್ಯವಹರಿಸುತ್ತಾರೆ. ನನಗನ್ನಿಸುವ ಪ್ರಕಾರ ಇದರಲ್ಲಿ ದೊಡ್ಡ ಪ್ರಮಾಣದ ಅವ್ಯವಹಾರ ನಡೆದಿದೆ. 65 ಕೋಟಿ ರೂ. ವಾಸ್ತವಿಕವಾಗಿ ಖರ್ಚಾಗುವ ಹಣವಾದರೆ ಸರ್ಕಾರ ಕೊಟ್ಟಿರುವುದು 203 ಕೋಟಿ, ರೂ ಒಂದೊಂದಕ್ಕೂ ನೀವು ಪಟ್ಟಿ ತರಿಸಿ ನೋಡಿ. "ಎ" ಗ್ರೇಡ್ ಶಾಲೆಗೆ ಒಂದು ವರ್ಷಕ್ಕೆ ಸರ್ಕಾರ ಖರ್ಚು ಮಾಡುವ ಹಣ 2,93,800 ರೂಪಾಯಿ ಬಿ ದರ್ಜೆ ಶಾಲೆಗೆ 3.82 ಲಕ್ಷ

ರೂಪಾಯಿ "ಸಿ" ದರ್ಜೆ ಶಾಲೆಗೆ 4.84 ಲಕ್ಷ ರೂಪಾಯಿ ಇದಲ್ಲದೆ ಕೊಠಡಿಯ ದುರಸ್ತಿಗಾಗಿ 45 ಸಾವಿರ ರೂಪಾಯಿ ಈ ಸಾವಿರ ಶಾಲೆಗಳಿಗೆ ಒಟ್ಟು ಸೇರಿ 4.50 ಕೋಟಿ ರೂ ಆದರೆ ವಾಸ್ತವಿಕವಾಗಿ ಖರ್ಚಾಗಿರುವ 2.50 ಕೋಟಿ ರೂ. ಇದು ಕೊಠಡಿ ರಿಪೇರಿಗೆ ನಾನು ಹೇಳುತ್ತಿರುವುದು. ಹಾಗಾಗಿ ಇದರಲ್ಲಿ ದೊಡ್ಡ ಮಟ್ಟದ ಅವ್ಯವಹಾರ ಆಗಿರುವುದರಿಂದ ಈಗ ಕೊಟ್ಟಿರುವ ಕಾಂಟ್ರಾಕ್ಟನ್ನು ತನಿಖೆ ನಡೆಸಬೇಕು ಮತ್ತು ಆ ಕಾಂಟ್ರಾಕ್ಟ್‌ಗಳನ್ನು ರದ್ದುಪಡಿಸಬೇಕು. ಈಗೇನು ಶಿಕ್ಷಕರು ಕೆಲಸ ಮಾಡುತ್ತಾ ಇದ್ದಾರೆ, ಅವರಿಗೆ ಯಾವುದೇ ಭದ್ರತೆ ಇಲ್ಲ. ಮತ್ತು ಕೊಡುತ್ತಿರುವ ಸಂಬಳ ಅವರು ಕಲಿತಿರುವ ಯೋಗ್ಯತೆಗೆ ಅನುಗುಣವಾಗಿಲ್ಲ. ಸರ್ಕಾರ ಯಾವ ಪ್ರಮಾಣದಲ್ಲಿ ಆ ಖಾಸಗಿ ಸಂಸ್ಥೆಗಳಿಗೆ ಹಣ ಬಿಡುಗಡೆ ಮಾಡಿದೆ ಆ ಹಣದಿಂದ ಕಮಿಷನನ್ನು ಮಾತ್ರ ತೆಗೆದುಕೊಂಡು ಉಳಿದ ಹಣ ನೇರವಾಗಿ ಆ ಶಿಕ್ಷಕರಿಗೆ ತಲುಪುವಂತಹ ಕ್ರಮ ಕೈಗೊಳ್ಳಬೇಕು. ಯಾರು ಇಂಟರ್‌ನೆಟ್ ಸೌಲಭ್ಯ ಕೊಡುತ್ತಾ ಇಲ್ಲ, ಅದನ್ನು ಕೊಡುವಂತೆ ಮಾಡಬೇಕು. ಈಗ ಶಾಲೆಗಳಲ್ಲಿ ವರದಿ ಕೊಟ್ಟಿರುವ ಪ್ರಕಾರ ಅವರು ಹೇಳುವುದೇನು ಅಂದರೆ ನಮ್ಮ ಜಿಲ್ಲೆಯ ಕಡೂರು, ಯುಗಚಿ, ಬೀರೂರು, ಬೆಟ್ಟಗೆರೆ ಇಲ್ಲೆಲ್ಲೂ ಇಂಟರ್‌ನೆಟ್ ಸೌಲಭ್ಯಗಳನ್ನು ಕೊಟ್ಟಿಲ್ಲ. ಮತ್ತು ಯಾವುದೇ ಶಾಲೆಯಲ್ಲಿ ಸಮಯಕ್ಕೆ ಸರಿಯಾಗಿ ಶಿಕ್ಷಕರಿಗೆ ಸಮಯಕ್ಕೆ ಸರಿಯಾಗಿ ಸಂಬಳವನ್ನೇ ಕೊಡುತ್ತಾ ಇಲ್ಲ. 3 ತಿಂಗಳಿಗೊಮ್ಮೆ 4 ತಿಂಗಳಿಗೊಮ್ಮೆ ಕೇಳಿದರೆ ಮನಸ್ಸಿಗೆ ಬಂದಂತೆ ವರ್ತಿಸುತ್ತಾರೆ ಮತ್ತು ಒಂದು ರೀತಿಯಲ್ಲಿ ದೌರ್ಜನ್ಯ ನಡೆಸುತ್ತಾರೆ. ಕಂಪ್ಯೂಟರ್ ಪ್ರಿಂಟರ್ ಹಾಳಾಗಿ ತಿಂಗಳುಗಳು ಕಳೆದರೂ ಅವರ ಬಿಡ್ ಪ್ರಕಾರ 15 ದಿವಸಕ್ಕೆ ಸರಿಪಡಿಸಬೇಕು ಎಂದು ಇದ್ದರೂ ಕೂಡ ತಿಂಗಳುಗಟ್ಟಲೆ ಕಳೆದರೂ ಅದರ ಬಗ್ಗೆ ಅವರಿಗೆ ಕಾಳಜಿ ಇಲ್ಲ, ಕೇಳಿದರೆ ಈಗ ಕಳುಹಿಸುತ್ತೇವೆ ಆಗ ಕಳುಹಿಸುತ್ತೇವೆ ಎಂದು ಶಿಕ್ಷಕರಿಗೆ ಉಡಾಫೆಯ ಉತ್ತರ ಕೊಡುತ್ತಾರೆ. ಮತ್ತೆ ಯುಪಿಎಸ್ ಏನಿದೆ ಅದು ಹೆಚ್ಚಿನ ಶಾಲೆಗಳಲ್ಲಿ ಹಾಳಾಗಿದೆ. ಬ್ಯಾಟರಿ ಬ್ಯಾಕಪ್ ಇಲ್ಲ, "ಎ" ಮತ್ತು "ಬಿ" ಗ್ರೇಡ್ ಶಾಲೆಗಳಿಗೆ ಜನರೇಟರ್‌ಗಳನ್ನು ನೀಡಿದ್ದರೂ ಅದಕ್ಕೆ ಪೆಟ್ರೋಲ್ ಸೀಮೆಯೆಣ್ಣೆ ನೀಡದೆ ಅದು ಒಂದು ರೀತಿಯ ಉಪಯೋಗಕ್ಕೆ ಇಲ್ಲದೆ ಇರುವಂತಹ ವಸ್ತುಗಳಾಗಿವೆ. ಪರೀಕ್ಷೆಯಾದ ಮಕ್ಕಳಿಗೆ ಪ್ರಮಾಣಪತ್ರ ನೀಡದಿರುವುದು. ಪಠ್ಯಪುಸ್ತಕ ಕೊಡದಿರುವುದು, ಶಿಕ್ಷಕರಿಗೆ ವೇತನ ಬಡ್ತಿ ನೀಡದಿರುವುದು ಇವೆಲ್ಲಾ ಅಲ್ಲದೇನೇ ಶಾಲಾ ಪ್ರತಿನಿಧಿಗಳಿಗೆ ಕಂಪ್ಯೂಟರ್ ಜ್ಞಾನ ಇಲ್ಲದೇ ಇದ್ದರೂ ಅಂಥವರನ್ನೂ ಶಾಲಾ ಪ್ರತಿನಿಧಿಗಳನ್ನಾಗಿ ನೇಮಿಸಿರುವುದು ಕಂಡು ಬಂದಿದೆ, ಇದೆಲ್ಲಾ ಇರುವುದರಿಂದ ಮತ್ತು ಸರ್ಕಾರ ಖರ್ಚು ಮಾಡುತ್ತಿರುವ ಹಣ ಮತ್ತು ನಿಜವಾಗಿ ಖರ್ಚಾಗುತ್ತಿರುವ ಹಣ ಇವೆರಡರ ನಡುವಿನ ಅಂತರ ಬಹಳ ದೊಡ್ಡ ಪ್ರಮಾಣದಲ್ಲಿ ಇರುವುದರಿಂದ ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು. ಸುಮ್ಮನೆ ಸಾರ್ವಜನಿಕರ ತೆರಿಗೆ ಹಣದಿಂದ ಕಟ್ಟಿರುವ ಹಣ ಸೋರಿಹೋಗಬೇಕಾ? ಹಾಗಾಗಬಾರದು ಎಂದು ಇದ್ದರೆ ವಾಸ್ತವಿಕ ನೆಲೆಯಲ್ಲಿ ಚಿಂತನೆ ಮಾಡಿ ಕೊಟ್ಟಿರುವ ಗುತ್ತಿಗೆಯನ್ನು ರದ್ದುಪಡಿಸಿ

ಸರ್ಕಾರದ ಹಣ ಸೋರಿಹೋಗುವುದನ್ನು ತಪ್ಪಿಸಬೇಕು. ಮತ್ತು ನೇರವಾಗಿ ಸರ್ಕಾರವೇ ಈ ಶಿಕ್ಷಣವನ್ನು ಕೊಡುವ ವ್ಯವಸ್ಥೆ ಮಾಡಬೇಕು ಎಂಬ ಒತ್ತಾಯ ಅಥವಾ ವಿನಂತಿಯನ್ನು ನಾನು ಈ ಸಂದರ್ಭದಲ್ಲಿ ಮಾಡಿಕೊಳ್ಳುತ್ತೇನೆ.

† **ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):** ಮಾನ್ಯ ಅಧ್ಯಕ್ಷರೇ, ಅವರು ಅನೇಕ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಎಲ್ಲವೂ ಬಹಳ ಸಕ್ರಮವಾಗಿದೆ ಎಂದು ನಾನು ಅಂದುಕೊಂಡಿಲ್ಲ. ಸರ್ಕಾರದ ಉದ್ದೇಶ ಗ್ರಾಮೀಣ ಪ್ರದೇಶದಲ್ಲಿರುವ ವಿದ್ಯಾರ್ಥಿಗಳು ಈ ಸೌಲಭ್ಯದಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ತೆಗೆದುಕೊಂಡಿರುವ ಒಂದು ಮಹತ್ವಾಕಾಂಕ್ಷೆಯ ಕಾರ್ಯಕ್ರಮ. ಇದರ ಕೆಳಗೆ ಒಳಗುತ್ತಿಗೆ ಕೊಟ್ಟಿರುವುದು ನಮ್ಮ ಗಮನಕ್ಕೆ ಬಂದಿಲ್ಲ. ಆಕ್ಷನ್‌ನಲ್ಲಿ ಪಡೆದಿರುವವರು ಆಪ್‌ಟೆಕ್, ಎನ್‌ಐಐಟಿ, ಎಸ್‌ಎಸ್‌ಐನವರು ಐಸಿಎಸ್‌ನವರು ಎಡುಕಾಂಪ್ ಎಂಬ ಐದು ಸಂಸ್ಥೆಗಳು ಬಿಡ್‌ನಲ್ಲಿ ಕನಿಷ್ಟ ಹಾಕಿರುವುದು. ಆದ್ದರಿಂದ ಅವರು ಪಡೆದಿದ್ದಾರೆ. ಅವರು ಒಳಒಪ್ಪಂದ ಮಾಡಿಕೊಂಡು ಬೇರೆಯವರಿಗೆ ಕೊಡಲು ಅವಕಾಶ ಇಲ್ಲ. ಇದರ ಜೊತೆಗೆ ಸಂಬಳ ಸರಿಯಾಗಿ ಕೊಡುವುದಿಲ್ಲ ಎಂಬುದರ ಬಗ್ಗೆ ನಾನು ಮೇಲ್ಮನೆಯಲ್ಲಿದ್ದಾಗ ಈ ವಿಚಾರವನ್ನು ಪ್ರಸ್ತಾಪ ಮಾಡಿದಾಗ ಆಗ ಭಾರತೀಯ ವಿಜ್ಞಾನ ಸಂಸ್ಥೆಯವರು ಇವುಗಳಿಗೆ ಮಾರ್ಗದರ್ಶನ ಮಾಡಬೇಕು ಎಂದು ತಿಳಿಸಲಾಯಿತು, ಕನಿಷ್ಟ ಪಕ್ಷ ಮೂರು ತಿಂಗಳಿಗೊಂದು ಸಲ ಇಂತಹ ದೂರುಗಳು ಬಂದಾಗ ಸರಿಯಾದ ರೀತಿಯಲ್ಲಿ ಕೆಲಸಕಾರ್ಯಗಳು ನಡೆದಿವೆಯೋ ಇಲ್ಲವೋ ಈ ಮಾಹಿತಿ ತಂತ್ರಜ್ಞಾನದ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಿದ್ದಾರೋ ಇಲ್ಲವೋ ಎಂಬುದರ ಮೇಲ್ವಿಚಾರಣೆಯ ಅಧಿಕಾರವನ್ನು ಭಾರತೀಯ ವಿಜ್ಞಾನ ಸಂಸ್ಥೆಗೆ ಕೊಟ್ಟರು.

3.50 ಪಿಎಂ

ಅವರು ಕೊಟ್ಟಿರುವ ತ್ರೈಮಾಸಿಕ ವರದಿಯ ಆಧಾರದಮೇಲೆ ಹಣ ಬಿಡುಗಡೆಯಾಗುವುದು ಇದೆ. ಈ ಸಂಸ್ಥೆಗಳಿಗೆ 20 ಕೋಟಿ ರೂಪಾಯಿ ಸರ್ಕಾರದಿಂದ ಬಾಕಿ ಇದೆ. ಅದನ್ನು ಕೊಡಬೇಕಾಗಿರುವುದು ಇದೆ. ಆದರೆ ಇವರು ಕೆಲವು ಕಡೆಗೆ ತಪ್ಪುಮಾಡಿದ್ದಾರೆ. ಸುಮಾರು ಸಾವಿರಕ್ಕಿಂತ ಹೆಚ್ಚು ಕಡೆಗೆ ಇಂಟರ್‌ನೆಟ್ ಮಾಡಿಕೊಡುವುದಕ್ಕೆ ಟೆಲಿಫೋನ್‌ನ ಸೌಲಭ್ಯಗಳಿಲ್ಲವೆಂದರೆ ಇದು ಪ್ರಾಥಮಿಕ ತಿಳುವಳಿಕೆ. ಟೆಲಿಫೋನ್ ಸೌಲಭ್ಯಗಳಿಲ್ಲದ ಕಡೆಗೆ ಇಂಟರ್‌ನೆಟ್‌ನ್ನು ಮಾಡುತ್ತೇನೆ. ಎಂದು ಹೇಳುವುದು ಏನು ಇದೆ. ಅದು ತೀರಾ ಅಪ್ರಬುದ್ಧವಾಗಿರುವ ಮಾತುಗಳು. ಆ ಕಾರಣಕ್ಕಾಗಿಯೇ ಐದು ಕೋಟಿ ರೂಪಾಯಿಗಳ ದಂಡವನ್ನು ಈಗಾಗಲೇ ಹಾಕಿದ್ದಾರೆ. ಆ ದಂಡದ ಹಣ ವಸೂಲಾತಿ ನಡೆದಿದೆ. ಒಂದು ವೇಳೆ ಐದು ಕೋಟಿ ರೂಪಾಯಿಗಳ ದಂಡವನ್ನು ಅವರಿಗೆ ಕೊಡಲಿಕ್ಕೆ ಸಾಧ್ಯವಿಲ್ಲದಿದ್ದರೂ ಕೂಡ 20 ಕೋಟಿ ರೂಪಾಯಿಗಳ ಬಾಕಿಯನ್ನೇನು ನಾವು ನಿಲ್ಲಿಸಿಕೊಂಡಿದ್ದೇವೆ, ಅದಕ್ಕೆ ಆಯಾ ಸಂಸ್ಥೆಗಳಿಗೆ ಕೊಡಬೇಕಾಗಿರುವ ಹಣದಲ್ಲಿ ದಂಡ ವಿಧಿಸಿದ

ಹಣವನ್ನು ಮುರಿದು ಅವರಿಗೆ ಉಳಿದಿರುವ ಹಣವನ್ನು ಕೊಡುತ್ತೇವೆ. ಈ ಯೋಜನೆ ಬರುವ ವರ್ಷದಲ್ಲಿ ಮುಕ್ತಾಯವಾಗುತ್ತದೆ, ಇದು ಕೇವಲ ಗುತ್ತಿಗೆ ಆಧಾರದಮೇಲೆ ನಡೆದಿರತಕ್ಕ ಒಂದು ಕಾರ್ಯಕ್ರಮ ಅದರಲ್ಲಿ ಬಹಳ ಕಡಿಮೆ ಸಂಬಳವನ್ನು ಕೊಟ್ಟಿದ್ದಾರೆನ್ನುವುದೂ ಕೂಡ ಇದೆ. ಒಂದು ವರ್ಷಕ್ಕೆ ಕಡಿಮೆ ಇರುವವರಿಗೇ ಎರಡು ಸಾವಿರದ ಏಳು ನೂರು, ಒಂದು ವರ್ಷಕ್ಕೆ ಹೆಚ್ಚಿಗೆ ಸೇವೆ ಸಲ್ಲಿಸಿದವರಿಗೇ 2900. ರೂ ಅದರಿಂದ ಹನ್ನೆರಡು ತಿಂಗಳು ಇರುವವರಿಗೆ 2550 ರೂಪಾಯಿಗಳು, ಈ ರೀತಿಯಲ್ಲಿ ಇಟ್ಟಿದ್ದಾರೆ. ಇದನ್ನು ಇನ್ನೂ ಸುಧಾರಣೆ ಮಾಡಬೇಕಾಗಿರತಕ್ಕ ಅಗತ್ಯ ಇದೆ ಎನ್ನುವ ಮಾತು ಏನು ಇದೆ, ಅದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಈ ಅನುಭವದ ಹಿನ್ನೆಲೆಯಲ್ಲಿ ಪ್ರಥಮವಾಗಿ ನಡೆದಿರತಕ್ಕದ್ದು ಈ ಒಂದು ಕಾರ್ಯಕ್ರಮದ ಅನುಭವದ ಹಿನ್ನೆಲೆಯಲ್ಲಿ ಆದಷ್ಟೂ ಫುಲ್‌ಪ್ರೂವ್‌ಆಗಿ ಯಾವುದೇ ದರಾಡಳಿಕ್ಕೆ ಮತ್ತು ಕೆಲವರಿಗೆ ಲಾಭವಾಗುವಂಥ ಅನುಕೂಲಗಳೇನು ಇವೆ, ಇವುಗಳು ಅಗಲಾರದಂತೆ ಸರ್ಕಾರ ನೋಡಿಕೊಳ್ಳುತ್ತದೆ.

ಶ್ರೀ ಸಿ.ಟಿ. ರವಿ : ಪೆನ್ಸನ್ ಕಟ್ಟಲಿಕ್ಕೆ ಏರ್ಪಾಡಾಗಬೇಕು. ಅವರಿಗೆ ಭದ್ರತೆಯೇ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಅವರನ್ನು ಗುತ್ತಿಗೆ ಆಧಾರದಮೇಲೆ ತೆಗೆದುಕೊಂಡಿರುವುದರಿಂದ ಕಾನೂನು ವ್ಯಾಪ್ತಿಯಲ್ಲಿ ಅವರಿಗೇನು ಸೌಲಭ್ಯಗಳು ಸಿಗಬೇಕೋ ಅವುಗಳು ಸಿಗುತ್ತವೆ.

(V) ವಿಷಯ : ರಾಜ್ಯದಲ್ಲಿ ಗಣಿಗಾರಿಕೆಯಲ್ಲಿ ನಡೆಯುತ್ತಿರುವ ಅಕ್ರಮಗಳ ಕುರಿತು

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೇ, ಗಣಿಗಾರಿಕೆ ಏನು ಕರ್ನಾಟಕದಲ್ಲಿ ನಡೆಯುತ್ತಿದೆ, ಅದರಲ್ಲಾಗಿರುವ ಅಕ್ರಮಗಳ ಬಗ್ಗೆ ಸರ್ಕಾರದ ಗಮನವನ್ನು ನಾನು ತಮ್ಮೂಲಕ ಸೆಳೆಯುತ್ತಿದ್ದೇನೆ.

† **ಶ್ರೀ ಪಿ.ಜಿ.ಆರ್. ಸಿಂಧ್ಯಾ(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ)** : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳಾದ ಮಾನ್ಯ ಮಾಧುಸ್ವಾಮಿಯವರು, ವಾಟಾಳ್ ನಾಗರಾಜ್‌ರವರು, ಶ್ರೀರಾಮರೆಡ್ಡಿಯವರು ಮತ್ತು ಜಯಪ್ರಕಾಶ್ ಹೆಗ್ಡೆಯವರು ನಿಯಮ 73 ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆ ಮೇರೆಗೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಉತ್ತರವನ್ನು ಒದಗಿಸುತ್ತಿದ್ದೇನೆ.

ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಅರಣ್ಯ ಹಾಗೂ ಅರಣ್ಯೇತರ ಪ್ರದೇಶಗಳಲ್ಲಿ ಗಣಿ ಗುತ್ತಿಗೆಗಳನ್ನು ಕ್ರಮವಾಗಿ ಅರಣ್ಯ ಸಂರಕ್ಷಣಾ ಕಾಯ್ದೆ, 1980ರ ಸೆಕ್ಷನ್ 2ರ ಪ್ರಕಾರ ಅರಣ್ಯ ಇಲಾಖೆಯ ದೃಢೀಕರಣ ಹಾಗೂ ಕಂದಾಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆದು, ನಿಯಮಾನುಸಾರ ಗಣಿ ಗುತ್ತಿಗೆ ಮಂಜೂರು ಮಾಡಲಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ ಒಟ್ಟು 510 ಗಣಿ ಗುತ್ತಿಗೆಗಳು ಚಾಲ್ತಿಯಲ್ಲಿರುತ್ತವೆ. ಗಣಿ ಗುತ್ತಿಗೆಗಳನ್ನು ಎಂ.ಸಿ.ಆರ್. 1960 ಮತ್ತು ಎಂ.ಎಂ. (ಡಿ & ಆರ್) ಆಕ್ಟ್ 1957ರ ನಿಯಮಗಳನುಸಾರ ಮಂಜೂರು